

# ನಾಯಿ ನಗರ!

**ಕಾ**ಕ್ಸಿಯಾಸ್ ಡು ಸುಲ್. ಬ್ರೆಝಿಲ್‌ನ ಪ್ರಖ್ಯಾತ ನಗರವಿದು. ಪ್ರಖ್ಯಾತಿಗೆ ಕಾರಣ ಏನೆಂದರೆ, ಅಲ್ಲೊಂದು ನಾಯಿ ನಗರ ಇದೆ!

ನಾಯಿ ನಗರ ಅಂದರೆ? ಹೌದು. ಅಲ್ಲಿನ ಫ್ರೆಂಡ್ ಆಫ್ ಅನಿಮಲ್ ಸೊಸೈಟಿ ಎಂಬ ಸರ್ಕಾರೇತರ ಸಂಸ್ಥೆ ಎರಡು ದಶಕಗಳ ಹಿಂದೆ ನಾಯಿಗಳಿಗಾಗಿ ಪ್ರತ್ಯೇಕ ಕಾಲನಿಯೊಂದನ್ನು ನಿರ್ಮಿಸಿದೆ.

ಪ್ರತಿ ನಾಯಿಗೂ ಪ್ರತ್ಯೇಕ ಮನೆ, ನೀರು ಕುಡಿಯಲು ಪುಟ್ಟ ಬಕೆಟ್, ಆಹಾರ ಸೇವಿಸಲು ಪ್ರತ್ಯೇಕ ಪುಟ್ಟಿ– ಹೀಗೆ ಅಲ್ಲಿ ಎಲ್ಲವೂ ನಾಯಿಗಳದ್ದೇ ದರ್ಬಾರು. ಸ್ಥಳೀಯ ಮುನ್ಸಿಪಾಲಿಟಿ ಸಂಸ್ಥೆಗೆ ಮೂರು ಎಕರೆ ಜಮೀನನ್ನು ದಾನ ಮಾಡಿದೆ. ಆ ಮೂರು ಎಕರೆಯಲ್ಲಿ 1600 ನಾಯಿಗಳ ಮನೆಗಳು ಮತ್ತು 200 ಬೆಕ್ಕುಗಳ ಮನೆಗಳೂ ಇವೆ. ಸ್ಥಳೀಯರು ಈ ಪ್ರದೇಶವನ್ನು 'ಡಾಗ್ ಸ್ಲಂ' ಎಂದು ಕರೆಯುತ್ತಾರೆ.

ಬೀದಿ ನಾಯಿಗಳಿಗೆ, ಜನರು ತಂದು ಬಿಡುವ ನಾಯಿಗಳಿಗೆ ಇಲ್ಲಿ ಪ್ರವೇಶವಿದೆ. ಪ್ರತಿ ತಿಂಗಳು ನಾಯಿಗಳಿಗಾಗಿ 12 ಸಾವಿರ ಕೆ.ಜಿ.ಯಷ್ಟು ಆಹಾರ ಪೂರೈಕೆ ಆಗುತ್ತದೆ. ನಾಯಿಗಳನ್ನು ಸಾಕಲು ಸರ್ಕಾರದ ಸಹಾಯಧನವೂ ಸಿಗಲಿದೆ ಎನ್ನುವ ಭರವಸೆ ಸಂಸ್ಥೆಯ ವಕ್ತಾರರದ್ದು. ಸಹಾಯ ಧನ ನೀಡಿದರೆ ಇನ್ನಷ್ಟು ನಾಯಿಗಳನ್ನು ಸಾಕಬಹುದು ಎನ್ನುತ್ತಾರೆ ಅವರು.

ಬೆಂಗಳೂರಿನಲ್ಲಿ ಬೀದಿ ನಾಯಿ ಕಾಟ ಜೋರಾಗಿದೆ. ಆಗಾಗ್ಗೆ ಮಕ್ಕಳಿಗೆ ಕಚ್ಚಿ ಸುದ್ದಿಯೂ ಆಗುತ್ತದೆ. ಇಲ್ಲೂ ಒಂದು ನಾಯಿನಗರ ನಿರ್ಮಿಸಿದರೆ ಹೇಗೆ? 'ಭಿಕ್ಷುಕರ ಕಾಲನಿಯನ್ನೇ ಸರಿಯಾಗಿ ನೋಡಿಕೊಳ್ಳಲು ಆಗಲ್ಲ; ಇನ್ನು ನಾಯಿಗಳನ್ನು ಸಾಕಿಯಾರೆ?' ಅನ್ನುತ್ತೀರಾ?

● ವಸಂತ್ ಮಾಲವಿ.



